**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ. 450/2023**

**ಪಿರ್ಯಾದುದಾರರು** **ವಿರುದ್ಧ** **ಆರೋಪಿಃ**

ಸಿದ್ದಾಪುರ ಪೋಲೀಸ್ ಠಾಣೆ ಕಾವೇರಪ್ಪ.ಕೆ.

::**ದೋಷಾರೋಪಣೆ**::

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ವಿರಾಜಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆಃ**

ಕಾವೇರಪ್ಪ ಕೆ., ತಂದೆಃಪೌತಿ ಕರ್ಪ ಸ್ವಾಮಿ ,42 ವರ್ಷ,
ವಾಸಃ ಚೆನ್ನನಕೋಟೆ ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು.

**ನಿಮ್ಮ ಮೇಲೆ ಇರುವ ದೋಷಾರೋಪ ಇಂತಿದೆಃ**

ದಿನಾಂಕ 11-04-2023 ರಂದು ಬೆಳಿಗ್ಗೆ 10.30 ಗಂಟೆಗೆ ಚೆನ್ನಯ್ಯನಕೋಟೆ ಗ್ರಾಮದ ಶ್ರೀ ಮಾರಿಯಮ್ಮ ದೇವಸ್ಥಾನದ ಹತ್ತಿರ ಆರೋಪಿಯಾದ ನೀವು ತಮ್ಮ ಮನೆಯ ಮುಂಭಾಗದ ಅಂಗಳದ ಬದಿಯ ಬೇಲಿಯಲ್ಲಿ ಮದ್ಯದ ಪ್ಯಾಕೇಟ್ ಗಳನ್ನು ಇಟ್ಟುಕೊಂಡು ಅಕ್ರಮವಾಗಿ ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡಿಲೆಕ್ಸ್ ವಿಸ್ಕಿಯ 48 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್‌ಗಳು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ–1:  ಮೇಲಿನ ಆಪಾದನೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ–2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

21 ನೇ ಫೆಬ್ರವರಿ ಮಾಹೆ 2024.

ಸಹಿಃ

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.